# ಕೋವಿಡ್ – 19 ಮತ್ತು ಶಿಕ್ಷಣ ವಂಚಿತ ವಿಕಲಾಂಗ ಮಕ್ಕಳು |ನಾಲ್ಕು ರಾಜ್ಯಗಳ ಒಳನೋಟ

## ಸಂಕ್ಷಿಪ್ತವಾದ ಸಾರಾಂಶ

### ಮುನ್ನುಡಿ

ವಿಶ್ವವ್ಯಾಪಿಯಾಗಿರುವ ಕೋವಿಡ್-19 ಸಾಂಕ್ರಾಮಿಕವು ಮಕ್ಕಳ ಶಿಕ್ಷಣ ವ್ಯವಸ್ಥೆಯನ್ನು ಗಂಭೀರ ದುರವಸ್ಥೆಗೆ ತಳ್ಳಿದೆ. ಇವರ ಪೈಕಿ ಅಂಗ ವೈಕಲ್ಯ ಹೊಂದಿರುವ ಮಕ್ಕಳು ತೀವ್ರವಾಗಿ ತೊಂದರೆಗೀಡಾಗಿದ್ದಾರೆ. ಎಲ್ಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವ ಕಾನೂನು ಚೌಕಟ್ಟು ನಮ್ಮಲ್ಲಿದ್ದರೂ ಸಹ, ವಿಕಲಾಂಗ ಮಕ್ಕಳ ಪೈಕಿ 5-19 ವಯೋಮಾನದ ನಾಲ್ಕನೇ-ಒಂದು ಭಾಗ ಮಕ್ಕಳು ಮತ್ತು 5 ವರ್ಷಗಳನ್ನು ಪೂರೈಸಿರುವ ವಿಕಲಾಂಗ ಮಕ್ಕಳ ಪೈಕಿ ನಾಲ್ಕನೇ ಮೂರು ಭಾಗ ಮಕ್ಕಳನ್ನು ಔಪಚಾರಿಕ ಶಿಕ್ಷಣ ಪಡೆಯಲು ಪ್ರವೇಶ ಕೂಡ ಪಡೆದಿರುವುದಿಲ್ಲ (ಯುನೆಸ್ಕೊ, 2019). ಮೇಲಾಗಿ ಇತರೆ ಮಕ್ಕಳಿಗೆ ಹೋಲಿಸಿದಾಗ ಭಾರತದಲ್ಲಿ ವಿಕಲಾಂಗ ಮಕ್ಕಳು ಹೆಚ್ಚಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದವರಾಗಿರುತ್ತಾರೆ (ಕಲ್ಯಾಣ್ ಪುರ್, 2008). ಭಾರತದ ಒಟ್ಟು ವಿಕಲಾಂಗರ ಪೈಕಿ ಶೇಕಡಾ 72 ರಷ್ಟು ಮಂದಿ ಗ್ರಾಮೀಣ ಭಾಗಗಳಲ್ಲಿ ವಾಸಮಾಡುತ್ತಾರೆ (ಯುನೆಸ್ಕೊ, 2019). ಬಡತನದ ಕಾರಣದಿಂದ ಹಲವಾರು ವಿಕಲಾಂಗ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಕೋವಿಡ್ -19 ಸಾಂಕ್ರಮಿಕದ ಸಂದರ್ಭದಲ್ಲಿ ಭಾರತದ ವಿಕಲಾಂಗ ಮಕ್ಕಳು ಶಿಕ್ಷಣಕ್ಕಾಗಿ ಎದುರಿಸುವ ವಿಶಿಷ್ಟ ಸವಾಲುಗಳಿಗೆ ಸಂಬಂಧಿಸಿದಂತೆ ಈಗ ಲಭ್ಯವಿರುವ ಸೀಮಿತವಾದ ಮಾಹಿತಿಗೆ ಪ್ರಸ್ತುತ ಅಧ್ಯಯನವು ತನ್ನ ಕೊಡುಗೆಯನ್ನೀಯುತ್ತದೆ. ಮೇಲಾಗಿ ಕೋವಿಡ್ ಮಹಾಮಾರಿಯು ವಿಕಲಾಂಗ ಮಕ್ಕಳು, ಅವರ ಕುಟುಂಬಗಳು ಮತ್ತು ಶಿಕ್ಷಕರ ಜೀವನದಲ್ಲಿ ಎದುರಾಗುವ ತಲ್ಲಣಗಳು – ಆರ್ಥಿಕ ಮತ್ತು ಆರೋಗ್ಯ ಸಮಸ್ಯೆಗಳು, ಆಹಾರದ ಲಭ್ಯತೆ, ವೈದ್ಯಕೀಯ ಚಿಕಿತ್ಸೆ ಮತ್ತು ಪುನರ್ವಸತಿ – ಮತ್ತು ಈ ಎಲ್ಲ ಸವಾಲುಗಳು ಶೈಕ್ಷಣಿಕ ಪ್ರಗತಿಯ ಮೇಲಾಗುವ ಪರಿಣಾಮಗಳನ್ನು ಕೂಡ ನಾವು ಅಧ್ಯಯನ ಮಾಡಲಿದ್ದೇವೆ. ಮೇಲಾಗಿ ವಿಕಲಾಂಗರ ಕ್ಷೇಮಾಭಿವೃದ್ಧಿಗೆ ಶ್ರಮಿಸುತ್ತಿರುವ ನಾಗರಿಕ ಸಮಾಜದ ಸಂಘಟನೆಗಳು ಹಾಗೂ ಸರ್ಕಾರಿ ಅಧಿಕಾರಿಗಳೊಡನೆ ಸಮಾಲೋಚಿಸಿ, ಕಾರ್ಯಸಾಧ್ಯವಾದ ಶಿಫಾರಸ್ಸುಗಳನ್ನು ಎರಡೂ ಶಿಕ್ಷಣ ಸಚಿವಾಲಯಗಳಿಗೆ (ರಾಜ್ಯ ಮತ್ತು ಕೇಂದ್ರ) ಮತ್ತು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯಗಳಿಗೆ (ರಾಜ್ಯ ಮತ್ತು ಕೇಂದ್ರ) ಸಲ್ಲಿಸುತ್ತೇವೆ. ಕೋವಿಡ್ -19 ಸಾಂಕ್ರಾಮಿಕ ಪಿಡುಗಿಗೆ ಪ್ರತಿಕ್ರಿಯೆಗಳು, ದೀರ್ಘಾವಧಿಯಲ್ಲಿ ಕಂಡುಬರುವ ಸಾಮಾಜಿಕ-ಆರ್ಥಿಕ ದೌರ್ಬಲ್ಯಗಳಿಗೆ ಪರಿಹಾರ ಮತ್ತು ಶೈಕ್ಷಣಿಕ ಒಳಗೊಳ್ಳುವಿಕೆಯನ್ನೂ ಶಿಫಾರಸ್ಸಗಳು ಒಳಗೊಳ್ಳುತ್ತವೆ.

ಈ ಅಧ್ಯಯನದ ಭಾಗವಾಗಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ 2020 ರ ಅವಧಿಯಲ್ಲಿ ಆಂಧ್ರ ಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡು – ಈ ನಾಲ್ಕು ರಾಜ್ಯಗಳ 164 ವಿದ್ಯಾರ್ಥಿಗಳು ಮತ್ತು ಅವರ ಪೋಷಕರು/ ಶುಶ್ರೂಷಕರು, 50 ಶಿಕ್ಷಕರು, 10 ನಾಗರಿಕ ಸಮಾಜದ ಸಂಘಟನೆಗಳು ಮತ್ತು 5 ಸರ್ಕಾರಿ ಅಧಿಕಾರಿಗಳೊಡನೆ ದೂರವಾಣಿ ಮೂಲಕ ವಿಶದವಾದ ಮತ್ತು ಅರೆ ಪೂರ್ವನಿರ್ಧಾರಿತ ಸಂದರ್ಶನಗಳನ್ನು ನಾವು ನಡೆಸಿದ್ದೇವೆ.

### ಅಧ್ಯಯನದ ಮುಖ್ಯಾಂಶಗಳು

<u>ವಿದ್ಯಾರ್ಥಿಗಳು ಮತ್ತು ಪೋಷಕರು</u>

ಕುಟುಂಬಗಳು ಕೆಲಸ ಕಳೆದುಕೊಳ್ಳುವ/ವರಮಾನ ಮತ್ತು ಸುಸಜ್ಜಿತ ಮನೆಯ ಅನುಕೂಲಗಳನ್ನು ಕಳೆದುಕೊಳ್ಳುವ, ಸಾಲ ಹೆಚ್ಚಾಗುವ, ಆಹಾರದ ಕೊರತೆಯ ಮತ್ತು ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಭೀತಿಯನ್ನು ಎದುರಿಸುತ್ತಿವೆ.

- ಮೂಲಭೂತ ಸೇವೆಗಳಿಗಾಗಿ ಸರ್ಕಾರದ ನೆರವಿನ ಯೋಜನೆಗಳನ್ನು ಅವಲಂಬಿಸಿರುವುದಾಗಿ ಕುಟುಂಬಗಳು ತಿಳಿಸಿದವು ಮತ್ತು ಈ ಯೋಜನೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳನ್ನು ಪಡೆಯುವಲ್ಲಿಯೂ ಸಹ ಹಲವಾರು ಅಡಚಣೆಗಳು ಎದುರಾಗಿದ್ದು, ಅಂತಹ ಕಠಿಣ ಪರಿಸ್ಥಿತಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಮಕ್ಕಳ ಅವಶ್ಯಕತೆಗಳು ಮತ್ತು ಕುಟುಂಬ ನಿರ್ವಹಣೆ ನಡುವೆ ಹಂಚಿಕೆ ಮಾಡುವಲ್ಲಿ ಸವಾಲುಗಳನ್ನು ಎದುರಿಸಬೇಕಾಯಿತು.
- ತಮ್ಮ ಮೇಲೆ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೆಚ್ಚಾಗಿ, ಮಾನಸಿಕ ಒತ್ತಡದಿಂದ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿತೆಂದು ಪೋಷಕರು ತಿಳಿಸಿದರು.
- ಮಕ್ಕಳ ಯೋಗಕ್ಷೇಮ – ಆರೋಗ್ಯ, ಪುನರ್ವಸತಿ ಮತ್ತು ದೈನಂದಿನ ಅವಶ್ಯಕತೆಗಳನ್ನು ಪೂರೈಸುವಲ್ಲಿ ಅಡಚಣೆಯುಂಟಾಗಿ ಕೆಲವು ಮಕ್ಕಳು ಅಪಸ್ಮಾರದಂತಹ ರೋಗಗಳಿಗೆ ಚಿಕಿತ್ಸೆಯನ್ನು ನಿಲ್ಲಿಸುವ ಅಥವಾ ನಿಯಮಿತವಾದ ಆರೋಗ್ಯ ಪರೀಕ್ಷೆ ಮತ್ತು ಪುನರ್ವಸತಿಯ ಚಿಕಿತ್ಸಾ ಕ್ರಮವನ್ನು ಕೈಬಿಡಬೇಕಾದ ಅನಿವಾರ್ಯತೆ ಉಂಟಾಯಿತು.
- ಈ ರೀತಿಯ ಅಡಚಣೆಯ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ವಿಶೇಷವಾಗಿ ಬುದ್ಧಿಮಾಂದ್ಯತೆ ಹೊಂದಿರುವ ಮಕ್ಕಳ ಮೇಲೆ ವಿಪರೀತ ಪರಿಣಾಮವನ್ನು ಬೀರಿತು.

ಸಾಂಕ್ರಾಮಿಕದ ಸಂದರ್ಭದಲ್ಲಿ ಶಿಕ್ಷಣವನ್ನು ಮುಂದುವರೆಸಲು ಬಳಸಿದ ಮಾಧ್ಯಮಗಳನ್ನು ಮಕ್ಕಳು ಹಲವಾರು ಕಾರಣಗಳಿಂದ ಬಳಸಿಕೊಳ್ಳಲಾಗಲಿಲ್ಲ:

- ಸೂಕ್ತ ಕಲಿಯುವ-ಕಲಿಸುವ ಸಾಮಗ್ರಿಗಳ ಕೊರತೆ
- ಡಿಜಿಟಲ್ ಸೇವೆಗಳು, ಹೈ-ಸ್ಪೀಡ್ ಅಂತರ್ಜಾಲ ಸಂಪರ್ಕದ ಅಭಾವ ಹಾಗೂ ಈ ಸೌಲಭ್ಯಗಳನ್ನು ಬಳಿಸಿಕೊಳ್ಳಲು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಅವಶ್ಯಕ ತಾಂತ್ರಿಕ ಜ್ಞಾನದ ಕೊರತೆ.
- ಡಿಜಿಟಲ್ ಸೇವೆಗಳು, ಹೈ-ಸ್ಪೀಡ್ ಅಂತರ್ಜಾಲ ಸಂಪರ್ಕದ ಅಭಾವ ಹಾಗೂ ಈ ಸೌಲಭ್ಯಗಳನ್ನು ಬಳಿಸಿಕೊಳ್ಳಲು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಅವಶ್ಯಕ ತಾಂತ್ರಿಕ ಜ್ಞಾನದ ಕೊರತೆ.
- ದೃಷ್ಟಿ ಮತ್ತು ಶ್ರವಣ ದೋಷ ಹೊಂದಿದ ಮಕ್ಕಳು ಕಲಿಯುವ-ಕಲಿಸುವ ಸಾಮಗ್ರಿಗಳನ್ನು ಬಳಸುವಲ್ಲಿ ಅಸಮರ್ಥತೆಯನ್ನು ವ್ಯಕ್ತಪಡಿಸಿದರು.
- ಬುದ್ಧಿಮಾಂದ್ಯತೆ ಹೊಂದಿರುವ ಮಕ್ಕಳು ತಮ್ಮ ಕಡೆಗೆ ಹೆಚ್ಚಿನ ಗಮನವನ್ನು ಅಪೇಕ್ಷಿಸಿದರು ಮತ್ತು ಸಾಮಾಜಿಕ ಸಂವಹನ ಹಾಗೂ ತಮ್ಮ ಮೊದಲಿನ ದಿನಚರಿಗೆ ಹಾತೊರೆದರು. ಮಕ್ಕಳು ಹೊಂದಿರುವ ವೈಕಲ್ಯತೆಯ ಪ್ರಮಾಣ ಮತ್ತು ಅವರ ಕುಟುಂಬಗಳ ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನು ಆಧಾರದ ಮೇಲೆ ಈ ಅನುಭವಗಳ ತೀವ್ರತೆ ಪ್ರತಿಯೊಬ್ಬರಿಗೂ ಭಿನ್ನವಾಗಿತ್ತು.

# ಸಂಕ್ಷಿಪ್ತವಾದ ಸಾರಾಂಶ

<u>ಶಿಕ್ಷಕರು</u>
ಶಿಕ್ಷಕರು ಹೆಚ್ಚಿದ ಬೋಧನೇತರ ಚಟುವಟಿಕೆಗಳು, ಉದ್ಯೋಗದ ಅಭದ್ರತೆಯ ಭಾವನೆಯನ್ನು ವರದಿ ಮಾಡಿದ್ದಲ್ಲದೆ ಮತ್ತು ವಿಕಲಾಂಗ ಮಕ್ಕಳಿಗಾಗಿ ಡಿಜಿಟಲ್ ಮಾಧ್ಯಮದಲ್ಲಿ ಬೋಧನೆ ಮಾಡುವಲ್ಲಿ ಸಮಸ್ಯೆಗಳನ್ನು ಎದುರಿಸಿದರು.

- ಸರ್ಕಾರೀ ಶಿಕ್ಷಕರು ಮತ್ತು ನಾಗರೀಕ ಸಮಾಜದ ಸಂಸ್ಥೆಗಳ ಸಹಯೋಗದ ಶಾಲೆಗಳ ಶಿಕ್ಷಕರು ಬೋಧನೇತರ ಚಟುವಟಿಕೆಗಳಲ್ಲಿ, ನಿರ್ದಿಷ್ಟವಾಗಿ ಹೇಳುವುದಾದರೆ ಕೋವಿಡ್-19 ಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತಾವು ಹೆಚ್ಚಾಗಿ ತೊಡಗಿಕೊಂಡಿರುವುದಾಗಿ ತಿಳಿಸಿದರು. ಖಾಸಗಿ ಶಾಲೆಯ ಶಿಕ್ಷಕರು ಬೋಧನೇತರ ಚಟುವಟಿಕೆಗಳಲ್ಲಿ ಯಾವುದೇ ರೀತಿಯ ಹೆಚ್ಚಳವನ್ನು ವರದಿ ಮಾಡಲಿಲ್ಲ.
- ಶಿಕ್ಷಕರ ಆರ್ಥಿಕ ಅಭದ್ರತೆಯನ್ನು ಎದುರಿಸಿದರು – ವೇತನ ಪಾವತಿಯಲ್ಲಿ ವಿಳಂಬ, ಒಪ್ಪಂದ ಆಧಾರಿತ ನೌಕರಿಯಾಗಿದ್ದಲ್ಲಿ ಒಪ್ಪಂದನ್ನು ಅಮಾನತ್ತಿನಲ್ಲಿಡುವುದು ಮತ್ತು ಒಪ್ಪಂದವನ್ನು ನವೀಕರಿಸುವ ಕುರಿತು ಅನಿಶ್ಚಿತತೆ ಕುರಿತು ಈ ಶಿಕ್ಷಕರು ಕಾತರಕ್ಕೆ ಒಳಗಾಗಿದ್ದರು.
- ವಿದ್ಯಾರ್ಥಿಗಳಂತೆ ಶಿಕ್ಷಕರೂ ಕೂಡ ಆನ್ ಲೈನ್ ಮೂಲಕ ಬೋಧನೆ ಮಾಡುವಲ್ಲಿ ಸವಾಲುಗಳನ್ನು ಎದುರಿಸಿದರು; ಅವಶ್ಯಕ ಉಪಕರಣಗಳ ಲಭ್ಯತೆ, ಅಂತರ್ಜಾಲ, ತಂತ್ರಜ್ಞಾನದ ತಿಳುವಳಿಕೆ ಮತ್ತು ಹೊಸ ಮಾದರಿಯ ಬೋಧನಾ ವ್ಯವಸ್ಥೆಗೆ ಹೊಂದಾಣಿಕೆ.
- ಶಿಕ್ಷಕರು ಹೆಚ್ಚಾಗಿ ಪೋಷಕರ ಮೇಲೆ ಅವಲಂಬಿತರಾಗಿದ್ದು, ವಿಕಲಾಂಗ ಮಕ್ಕಳು ಮತ್ತು ಅವರ ಶುಶ್ರೂಷಕರು ಡಿಜಿಟಲ್ ಮಾಧ್ಯಮದ ಬೋಧನೆಯ ಲಭ್ಯತೆ ಕುರಿತು ಯಾವ ಸಮಸ್ಯೆಗಳನ್ನು ಎದುರಿಸುತ್ತಿರವರೋ ಅದೇ ತರಹದ ಸವಾಲುಗಳನ್ನು ಶಿಕ್ಷಕರೂ ಕೂಡ ಎದುರಿಸುತ್ತಿರುವುದು ಕಂಡುಬಂದಿತು.
- ಡಿಜಿಟಲ್ ಮಾಧ್ಯಮದ ಬೋಧನೆ ಶಿಕ್ಷಕ-ವಿದ್ಯಾರ್ಥಿ ನಡುವೆ ಎರಡು ದಿಕ್ಕಿನಲ್ಲಿ ಸಂವಹನಕ್ಕೆ ಸೀಮಿತ ಅವಕಾಶಗಳನ್ನು ನೀಡುತ್ತದೆ. ಕೆಲವು ಶಿಕ್ಷಕರು ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿದರಾದರೂ, ವೈರಸ್ ಹರಡುವ ಭಯದಿಂದ ಸಮುದಾಯದ ಸದಸ್ಯರು ಶಿಕ್ಷಕರಿಗೆ ತಮ್ಮ ಮನೆಗಳಿಗೆ ಪ್ರವೇಶ ನೀಡಲು ಹಿಂಜರಿದರು.
- ವಿಕಲಾಂಗ ಮಕ್ಕಳಿಗೆ ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರಿಗೆ ಯಾವುದೇ ಮಾರ್ಗದರ್ಶನ ಅಥವಾ ತರಬೇತಿ ನೀಡಲಾಗಿರಲಿಲ್ಲ (ಕೇರಳ ಹೊರತು ಪಡಿಸಿ)
- ಸಾಂಕ್ರಾಮಿಕ ಪ್ರಾರಂಭವಾದಾಗಿನಿಂದ ವಿಕಲಾಂಗ ಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡುವ ಮೊತ್ತ ಮತ್ತು ಪ್ರಯತ್ನಗಳು ಕಡಿಮೆಯಾಗಿದ್ದಲ್ಲದೆ ಈ ಮೊತ್ತ ಮತ್ತು ಶ್ರಮ ಬೇರೆ ಉದ್ದೇಶಗಳಿಗೆ ಬಳಕೆಯಾಗುತ್ತಿದೆ ಎಂದು ನಾಗರಿಕ ಸಮಾಜದ ಸಂಘಟನೆಗಳು ಮಾಹಿತಿ ನೀಡಿದವು. ಹಾಗೆಯೇ ಆಹಾರ ಮತ್ತು ಆರೋಗ್ಯಕ್ಕೆ ಹೋಲಿಸಿದಾಗ ಶಿಕ್ಷಣ ಆದ್ಯತೆ ಪಡೆಯಲಾಗದು ಎಂದು ಅಭಿಪ್ರಾಯಪಟ್ಟರು. ಎಲ್ಲ ರಾಜ್ಯಗಳಲ್ಲಿ ಡಿಜಿಟಲ್ ಮಾಧ್ಯಮದಲ್ಲಿ ಬೋಧನೆ ಮಾಡುವುದರ ಕುರಿತು ಈ ವ್ಯವಸ್ಥೆ ಎಲ್ಲರಿಗೂ ಲಭ್ಯವಾಗುವುದರ ಕುರಿತು ಮತ್ತು ಅದು ಎಷ್ಟರಮಟ್ಟಿಗೆ ಪರಿಣಾಮಕಾರಿ ಎಂಬುದರ ಬಗ್ಗೆಯೂ ಕಾಳಜಿ ವ್ಯಕ್ತಪಡಿಸಿದರು. ಈ ಸಂಬಂಧ ಹಿಂದುಳಿದ ಕುಟುಂಬಗಳಿಗೆ ಬೆಂಬಲದ ನೀಡುವ ಅವಶ್ಯಕತೆಯನ್ನೂ ಅವರು ತಿಳಿಸಿದರು.

## ಶಿಫಾರಸ್ಸುಗಳು

ಎಲ್ಲ ಹಿತಾಸಕ್ತಿದಾರರೊಡನೆ – ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ನಾಗರಿಕ ಸಮಾಜದ ಸಂಘಟನೆಗಳು ಮತ್ತು ಸರ್ಕಾರಿ ಅಧಿಕಾರಿಗೊಳೊಂದಿಗೆ ಸಮಾಲೋಚಿಸಿ, ಮತ್ತು ಈ ಅಧ್ಯಯನದ ವರದಿಯನ್ನಾಧರಿಸಿ, ವಿಕಲಾಂಗ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳು ಹಾಗೂ ಸಾಮಾಜಿಕ ಭದ್ರತೆ ದೊರೆಯಲು ಸರ್ಕಾರ ಇಲಾಖೆಗಳ ನಡುವೆ ಮತ್ತು ಸರ್ಕಾರ ಹಾಗೂ ನಾಗರಿಕ ಸಮಾಜದ ಸಂಘಟನೆಗಳ ನಡುವಿನ ಸಹಕಾರದೊಂದಿಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಕಾರ್ಯಸಾಧ್ಯವಾದ ಶಿಫಾರಸುಗಳನ್ನು ನಾವು ನೀಡುತ್ತೇವೆ.

ಈ ಅಧ್ಯಯನದ ವರದಿಯು ನಾಲ್ಕು ರಾಜ್ಯಗಳಲ್ಲಿ ನಾವು ಸಂಪರ್ಕಿಸಿದ ಕೆಲ ಮಾದರಿಗಳಿಗೆ ಮಾತ್ರ ಸೀಮಿತವಾಗಿದ್ದು, ನಮ್ಮ ಶಿಫಾರಸುಗಳು ಇತರೆ ರಾಜ್ಯಗಳಲ್ಲಿಯೂ ಸಹ ವಿಕಲಾಂಗ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಲು ಮಾರ್ಗದರ್ಶನ ನೀಡಬಹುದು. ಕೋವಿಡ್ -19 ಸಾಂಕ್ರಾಮಿಕ ಪಿಡುಗಿಗೆ ಪ್ರತಿಕ್ರಿಯೆಗಳು, ದೀರ್ಘಾವಧಿಯಲ್ಲಿ ಕಂಡುಬರುವ ಸಾಮಾಜಿಕ-ಆರ್ಥಿಕ ದೌರ್ಬಲ್ಯಗಳಿಗೆ ಪರಿಹಾರ ಮತ್ತು ಶೈಕ್ಷಣಿಕ ಒಳಗೊಳ್ಳುವಿಕೆಯನ್ನೂ ಶಿಫಾರಸುಗಳು ಒಳಗೊಳ್ಳುತ್ತವೆ.

ಈ ಶಿಫಾರಸುಗಳು ಮುಖ್ಯವಾಗಿ ಶಿಕ್ಷಣ ಸಚಿವಾಲಯ (ರಾಜ್ಯ ಮತ್ತು ಕೇಂದ್ರ), ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ (ರಾಜ್ಯ ಮತ್ತು ಕೇಂದ್ರ), ವಿಕಲಾಂಗ ಕಲ್ಯಾಣ ಇಲಾಖೆಗಳ ಆಯುಕ್ತರು ಮತ್ತು ಆರೋಗ್ಯ ಹಾಗೂ ಸಮಾಜ ಕಲ್ಯಾಣ ಇಲಾಖೆಗಳಿಗೆ ಅನ್ವಯಿಸುತ್ತವೆ.

# ಸಂಕ್ಷಿಪ್ತವಾದ ಸಾರಾಂಶ

## 1.ಶೈಕ್ಷಣಿಕ ಸೌಲಭ್ಯಗಳು ಮತ್ತು ವಿಕಲಾಂಗ ಮಕ್ಕಳಿಗೆ ಹೆಚ್ಚಿನ ಅವಕಾಶಗಳು

**1.1 ಮುಖಾಮುಖಿ ಸಮಾಲೋಚನೆಯೂ ಸೇರಿದಂತೆ ವಿಕಲಾಂಗ ಮಕ್ಕಳ ಅವಶ್ಯಕತೆಗಳ್ನು ಗುರ್ತಿಸುವುದು ಮತ್ತು ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ದೂರಶಿಕ್ಷಣದಲ್ಲಿ ನೀಡಬಹುದಾದ ಬೋಧನೆಗಳು.**

| ಅನ್ವಯವಾಗುವ ಕಾಯ್ದೆ | ಶಿಫಾರಸುಗಳು |
|---|---|
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 16 (iii) [ವಿಕಲಾಂಗ ಮಕ್ಕಳಿಗೆ 'ಸೂಕ್ತ ಅವಕಾಶ' ನೀಡುವಲ್ಲಿ ಶಿಕ್ಷಣ ಸಂಸ್ಥೆಗಳ ಕರ್ತವ್ಯ], ಮತ್ತು<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 17(ಎ) [ವಿಕಲಾಂಗ ಮಕ್ಕಳನ್ನು, ಅವರ ಅವಶ್ಯಕತೆಗಳನ್ನು ಗುರ್ತಿಸಲು, ಮತ್ತು ಅವರ ಅವಶ್ಯಕತೆಗಳನ್ನು ಯಾವ ಮಟ್ಟಕ್ಕೆ ಪೂರೈಸಲಾಗುತ್ತಿದೆ ಎಂದು ತಿಳಿಯಲು ಕಾಲಕಾಲಕ್ಕೆ ಸಮೀಕ್ಷೆ ನಡೆಸುವುದು] | • ವಿಕಲಾಂಗ ಮಕ್ಕಳ ಪೋಷಕರೊಡನೆ ಸಮಾಲೋಚಿಸಿ, ಸಾಂಕ್ರಾಮಿಕದ ಸಂದರ್ಭದಲ್ಲಿ ಶಿಕ್ಷಣಕ್ಕಾಗಿ ಬಳಸಲಾದ ಮಾಧ್ಯಮದ ಲಭ್ಯತೆ, ಗುಣಮಟ್ಟ ಹಾಗೂ ಮಕ್ಕಳನ್ನು ಚಟುವಟಿಕೆಗಳಲ್ಲಿ ನಿರತರಾಗಿಸಲು ಬಳಸುವ ಕ್ರಮಗಳ ಸಮೀಕ್ಷೆ<br><br>ಬುದ್ಧಿ ಮಾಂದ್ಯತೆ ಹೊಂದಿರುವ ಮಕ್ಕಳಿಗೆ ವಿಶೇಷ ಶಾಲೆಗಳ ಮತ್ತು ಪುನರ್ವಸತಿ ಕೇಂದ್ರಗಳ ಅವಶ್ಯಕತೆ ಇರಬಹುದು, ದೀರ್ಘಕಾಲದ ಖಾಯಿಲೆಯಿಂದ ಬಳಲುತ್ತಿರುವ ಮಕ್ಕಳು, ಕಡಿಮೆ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಮಕ್ಕಳು (ವೈರಾಣು ತಗಲುವ ಸಾಧ್ಯತೆ ಹೆಚ್ಚಾಗಿರುವ ಮತ್ತು ಸಾಂಕ್ರಾಮಿಕದಿಂದ ತೀವ್ರವಾಗಿ ಬಳಲುವ ಸಾಧ್ಯತೆ ಹೊಂದಿರುವ ಮಕ್ಕಳು) ಮತ್ತು 5 ವರ್ಷ ವಯೋಮಾನದ ಕೆಳಗಿನ ಮಕ್ಕಳು ಪ್ರಸ್ತುತ ಪರಿಸ್ಥಿತಿಯಲ್ಲಿ ಇನ್ನೂ ಶಾಲೆಗಳಿಗೆ ಹಿಂದಿರುಗಬಾರದು. |

**1.2 ನಿರಂತರ ಶಿಕ್ಷಣಕ್ಕಾಗಿ ವಿಕಲಾಂಗ ಮಕ್ಕಳನ್ನು ಶಾಲೆಗೆ ವಾಪಾಸು ಕರೆದುಕೊಂಡು ಬರುವುದು ಮತ್ತು ಅವರ ಪುನರ್ವಸತಿ (ಅವಶ್ಯಕತೆಯಿರುವಲ್ಲಿ)**

| ಅನ್ವಯವಾಗುವ ಕಾನೂನು | ಶಿಫಾರಸು |
|---|---|
| • ಶಿಕ್ಷಣ ಹಕ್ಕು ಕಾಯ್ದೆ, 2009 ಕಲಂ 8(ಎಫ್) [ಪ್ರತಿ ಮಗುವಿಗೆ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ, ಹಾಜರಿ ಮತ್ತು ಪ್ರತಿ ಮಗು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಖಚಿತಪಡಿಸಿಕೊಳ್ಳುವಲ್ಲಿ ಸರ್ಕಾರದ ಕರ್ತವ್ಯಗಳು) | • ಸಾಂಕ್ರಾಮಿಕದ ಸಂದರ್ಭದಲ್ಲಿ ಶಾಲೆಯನ್ನು ನಡುವಲ್ಲಿ ಬಿಡುವ ಸಾಧ್ಯತೆಯನ್ನು ಹೆಚ್ಚು ಹೊಂದಿರುವ ಅಥವಾ ಈಗಾಗಲೇ ಶಿಕ್ಷಣವನ್ನು ಮೊಟಕುಗೊಳಿಸಿರುವ ಮಕ್ಕಳನ್ನು ಗುರ್ತಿಸುವುದು ಮತ್ತು ಅವರ ಜಾಡು ಹಿಡಿಯುವುದು. ವಿಕಲಾಂಗ ಮಕ್ಕಳು; ಕಿರಿಯ ಸಹೋದರ/ಸಹೋದರಿಯರನ್ನು ಹೊಂದಿರುವ ಹೆಣ್ಣು ಮಕ್ಕಳು; ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದ ಮಕ್ಕಳು; ವಲಸೆ ಬಂದಿರುವ ಕುಟುಂಬಕ್ಕೆ ಸೇರಿರುವ ಮಕ್ಕಳು; ಬುಡಕಟ್ಟು ಸಮುದಾಯಗಳಿಗೆ ಸೇರಿರುವ ಮಕ್ಕಳು.<br>• ಕೋವಿಡ್ – 19 ಶಿಷ್ಟಚಾರವನ್ನು ಪಾಲಿಸಿ ವಿದ್ಯಾರ್ಥಿನಿಲಯಗಳು/ಸನಿವಾಸ ಶಾಲೆಗಳನ್ನು ಹಿರಿಯ ವಿಕಲಾಂಗ ಮಕ್ಕಳಿಗೆ ಮುಕ್ತವಾಗಿಸುವುದು. |
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ಕಲಂ 16 (viii) [ವಿಕಲಾಂಗ ಮಕ್ಕಳಿಗೆ ಮತ್ತು ಅವರ "ಶುಶ್ರೂಷಕರು/ಆರೈಕೆ ಮಾಡುವವರಿಗೆ" ಸಾರಿಗೆ ಸೌಲಭ್ಯ ಕಲ್ಪಿಸುವುದು) | • ಅಂಗವೈಕಲ್ಯದಿಂದಾಗಿ ಸೀಮಿತ ಚಲನೆಯನ್ನು ಹೊಂದಿರುವ ಮಕ್ಕಳಿಗೆ ಸಾರಿಗೆ ಸೌಲಭ್ಯಗಳಲ್ಲಿ ಆದ್ಯತೆ ನೀಡುವುದು |
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ಕಲಂ 16 (ii) [ಕಟ್ಟಡಗಳು, ಕ್ಯಾಂಪಸ್ ಮತ್ತು ಇನ್ನಿತರ ಸೌಲಭ್ಯಗಳನ್ನು ವಿಕಲಾಂಗರು ಸುಲಭವಾಗಿ ಬಳಸುವಂತೆ ರೂಪಿಸುವುದು)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ಕಲಂ 17 (ಅಂತರ್ಗತ ಶಿಕ್ಷಣ ಒದಗಿಸಲು ಕೈಗೊಳ್ಳ ಬೇಕಾಗಿರುವ ಕ್ರಮಗಳು)<br>• ಶಿಕ್ಷಣ ಹಕ್ಕು ಕಾಯ್ದೆ, 2009 ರ ಕಲಂ 8(ಡಿ) (ಮೂಲಭೂತ ಸೌಕರ್ಯ ಒದಗಿಸುವ ಕುರಿತು))<br>• ಈ ಕಾಯ್ದೆಯ ಪರಿಶಿಷ್ಟದಲ್ಲಿರುವ "ಶಾಲೆಯೊಂದಕ್ಕೆ ಮಾದರಿ ಮತ್ತು ಮಾನದಂಡಗಳು" (ವಿಶಿಷ್ಟ ಅವಶ್ಯಕತೆಗಳನ್ನು ಹೊಂದಿರುವ ವಿಕಲಾಂಗ ಮಕ್ಕಳಿಗೆ ಶಾಲ ಮೂಲಭೂತ ಸೌಕರ್ಯ ಮತ್ತು ಕಲಿಯುವ-ಕಲಿಸುವ ಸಾಮಗ್ರಿಗಳ ಲಭ್ಯತೆ ಕುರಿತು) | ಎರಡೂ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದರ ಮೂಲಕ ಶಾಲೆಗಳಿಗೆ ಮತ್ತು ಅಂಗನವಾಡಿಗಳಿಗೆ ಭೌತಿಕವಾಗಿ ಪ್ರವೇಶ ಮಾಡಲು ಇರುವ ಅಡೆತಡೆಗಳನ್ನು ನಿವಾರಿಸುವುದು.<br>• ದೃಷ್ಟಿ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಸೂಕ್ತವಾದ ಕಲಿಯುವ-ಕಲಿಸುವ ಸಾಮಗ್ರಿಗಳು ಶಾಲೆಗಳಲ್ಲಿ ದೊರೆಯುವಂತೆ ಖಚಿತ ಪಡಿಸಿಕೊಳ್ಳುವುದು<br>• ಸೂಕ್ತ ಮೂಲಭೂತ ಸೌಕರ್ಯ ಒದಗಿಸುವುದು: ಚಲನವಲನಕ್ಕೆ ಸಂಬಂಧಿಸಿದ ವೈಕಲ್ಯವನ್ನು ಹೊಂದಿರುವ ಮಕ್ಕಳಿಗೆ ರಾಂಪ್ ಸೌಲಭ್ಯ ಒದಗಿಸುವುದು; ನೆರವಾಗುವ ಸಾಧನಗಳನ್ನು ಒದಗಿಸುವುದು; ಶೌಚಾಲಯಗಳಲ್ಲಿ ಹ್ಯಾಂಡ್ ರೈಲ್ ಗಳನ್ನು ಅಳವಡಿಸುವುದು; ವೀಲ್ ಚೇರ್ ಗಳಂತಹ ಸಾಧನಗಳಿಗೆ ಸ್ಥಳ ಒದಗಿಸುವುದು. |

# ಸಂಕ್ಷಿಪ್ತವಾದ ಸಾರಾಂಶ

**1.3 ಡಿಜಿಟಲ್ ಮಾದರಿಯ ಶಿಕ್ಷಣವನ್ನು ಎಲ್ಲ ಮಕ್ಕಳು ಪಡೆಯುವಂತೆ ಸೌಲಭ್ಯವನ್ನು ಒದಗಿಸುವುದು**

| **ಅನ್ವಯವಾಗುವ ಕಾನೂನು** | **ಶಿಫಾರಸು** |
|---|---|
| • ಶಾಲಾ ಶಿಕ್ಷಣದಲ್ಲಿ ಐಸಿಟಿ ಕುರಿತು ರಾಷ್ಟ್ರೀಯ ನೀತಿಯ ಕಲಂ 4.6 (ವಿಶೇಷ ಅವಶ್ಯಕತೆ ಇರುವ ಮಕ್ಕಳಿಗೆ ಐಸಿಟಿ ಕುರಿತು) | ಐಸಿಟಿ ರಾಷ್ಟ್ರೀಯ ನೀತಿ, 2012 ಮತ್ತು ಅದರ ಅನ್ವಯತೆಯನ್ನು ಪರಿಷ್ಕರಿಸುವುದು<br>• ಪರಿಣಾಮಕಾರಿ, ಪರಸ್ಪರ ಪ್ರತಿಕ್ರಿಯೆ ನೀಡುವ ಮತ್ತು ಪರಿಣಾಮಕಾರಿ ಬಹುಮಾಧ್ಯಮದ ಸಂವಹನ ಮಾದರಿಗಳನ್ನು ಬಳಸುವುದು.<br>• ಮನೆ ಭೇಟಿ, ಫಾಲೋ ಅಪ್ ಸಲುವಾಗಿ ದೂರವಾಣಿ ಕರೆಗಳು ಮತ್ತು ಸಂದೇಶಗಳನ್ನು ಕಳುಹಿಸುವ ಮೂಲಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಎರಡೂ ದಿಸೆಯಿಂದ ಸಂವಹನ ಏರ್ಪಡಿಸುವುದು.ವೈಯುಕ್ತಿಕ ಸಾಧನಗಳು, ಹೈ-ಸ್ಪೀಡ್ ಅಂತರ್ಜಾಲ ಸಂಪರ್ಕಗಳ ಮೇಲೆ ಅವಲಂಬನೆಯನ್ನು ಕಡಿಮೆಗೊಳಿಸುವ ಸಲುವಾಗಿ ಕಲಿಯುವ-ಕಲಿಸುವ ಸಾಮಗ್ರಿಗಳನ್ನು ಭೌತಿಕ ರೂಪದಲ್ಲಿ ಒದಗಿಸುವ ಪ್ರಯತ್ನ ಮಾಡುವುದು ಮತ್ತು ಸಾಧ್ಯವಿರುವಲ್ಲಿ ಮನೆ ಭೇಟಿಗಳನ್ನು ನಡೆಸುವುದು. |
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 17 (ಅಂತರ್ಗತ ಶಿಕ್ಷಣವನ್ನು ಉತ್ತೇಜಿಸುವುದು ಮತ್ತು ಸುಲಭಗೊಳಿಸುವುದು)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 40 (ವಿಕಲ ಚೇತನರಿಗೆ ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನದ ಸೌಲಭ್ಯಗಳು ಲಭಿಸುವಂತೆ ಮಾಡಲು ಮಾನದಂಡಗಳನ್ನು ರೂಪಿಸುವುದು)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 42 (ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಲಭ್ಯತೆ ಕುರಿತು) | ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸೌಲಭ್ಯಗಳ ಲಭ್ಯತೆ ಕುರಿತು ಇರುವ ಸಮಸ್ಯೆಗಳನ್ನು ನಿವಾರಿಸುವುದು<br>• ಇತರ ರಾಜ್ಯಗಳು ಮತ್ತು ಪರಿಣತರೊಂದಿಗೆ ಸಮಾಲೋಚಿಸಿ‌ಈ ವರೆಗೂ ಬಳಸಿರುವ ಕಲಿಯುವ-ಕಲಿಸುವ ಸಾಧನಗಳ ಉಪಯುಕ್ತತೆಯನ್ನು ಪುನ:ವಿಮರ್ಶಿಸುವುದು; ಉದಾಹರಣೆಗೆ ದೂರದರ್ಶನದಲ್ಲಿ ಪ್ರಸಾರವಾಗುವ ಪಾಠಗಳಿಗೆ ಸಂಜ್ಞೆಗಳ ಮೂಲಕ ಸಂವಹನ ಮಾಡುವಲ್ಲಿ ಪರಿಣತಿ ಹೊಂದಿರುವವರ ಸೇವೆಗಳನ್ನು ಬಳಸಿಕೊಳ್ಳುವುದು; ಈ ಸಮಾಲೋಚನೆಯಿಂದ ಪ್ರಸ್ತುತ ಲಭ್ಯವಿರುವ ಸೌಲಭ್ಯಗಳ ಗುಣಮಟ್ಟವನ್ನು ಸಾಧ್ಯವಾದಲ್ಲೆಲ್ಲ ಹೆಚ್ಚಿಸಹಬಹುದಾಗಿದೆ.<br>• ಲೈವ್ ತರಗತಿಗಳ ಬದಲಾಗಿ ಮೊದಲೇ ರೆಕಾರ್ಡ್ ಮಾಡಿದ ವಿಡಿಯೋಗಳು, ಟೆಲಿವಿಜನ್ ಪಾಠಗಳನ್ನು ದೊರೆಯುವಂತೆ ಮಾಡುವುದು - ಇದರಿಂದ ವಿದ್ಯುಚ್ಛಕ್ತಿ ಮತ್ತು ಅಂತರ್ಜಾಲ ಸಮಸ್ಯೆ, ಧ್ವನಿಯ ಗುಣಮಟ್ಟಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ.<br>• ಸಾಧ್ಯವಾದಲ್ಲೆಲ್ಲ ಅಶಕ್ತ ಕುಟುಂಬಗಳಿಗೆ ಸಾಧನಗಳು/ಅಂತರ್ಜಾಲ ಸಂಪರ್ಕವನ್ನೊದಗಿಸುವುದು. |
| • ವಿಕಲಚೇತನರ ಹಕ್ಕುಗಳ ಕಾಯ್ದೆ, 2016ರ ಕಲಂ 17 ( (ಅಂತರ್ಗತ ಶಿಕ್ಷಣವನ್ನು ಉತ್ತೇಜಿಸುವುದು ಮತ್ತು ಸುಲಭಗೊಳಿಸುವುದು)<br>• ಶಿಕ್ಷಣ ಹಕ್ಕು ಕಾಯ್ದೆ, 2019 ರ ಪರಿಶಿಷ್ಟದಲ್ಲಿರುವ "ಶಾಲೆಯೊಂದಕ್ಕೆ ಮಾದರಿ ಮತ್ತು ಮಾನದಂಡಗಳು" | ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಮಸ್ಯೆಗಳನ್ನು ನಿವಾರಿಸುವುದು<br>• ಬೋಧನ ಮಾಧ್ಯಮ ಯಾವುದೇ ಆದರೂ ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಸಾಧನ ಸಲಕರಣೆಗಳನ್ನು ಒದಗಿಸುವುದು.<br>• ಶಿಕ್ಷಣದಲ್ಲಿ ತಂತ್ರಜ್ಞಾನ ಬಳಸಲು, ವಿಶೇಷವಾಗಿ ವಿಶಿಷ್ಟವಾದ ವೈಕಲ್ಯ ಹೊಂದಿರುವ ಮಕ್ಕಳಿಗೆ ಬೋಧನೆಗಾಗಿ - ಶಿಕ್ಷಕರಿಗೆ ತರಬೇತಿ ನೀಡುವುದು |

**1.4 ಎಲ್ಲ ಬೋಧನಾ ವಿಧಾನಗಳಲ್ಲಿ ವಿಕಲಾಂಗ ಮಕ್ಕಳ ಅವಶ್ಯಕತೆಗಳನ್ನು ಸಮಗ್ರವಾಗಿ ಪೂರೈಸುವುದು**

| ಅನ್ವಯವಾಗುವ ಕಾನೂನು | ಶಿಫಾರಸು |
|---|---|
| • ವಿಕಲಚೇತನರ ಹಕ್ಕುಗಳ ಕಾಯ್ದೆ, 2016ರ ಕಲಂ 17 (ಸಿ) (ವಿವಿಧ ರೀತಿ ವೈಕಲ್ಯತೆಯನ್ನು ಹೊಂದಿರುವ ಮಕ್ಕಳಿಗೆ ಸೂಕ್ತ ಭಾಷಾ ಮಾಧ್ಯಮದಲ್ಲಿ ಬೋಧನೆ ಮಾಡಲು ಅರ್ಹ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು) | • ಮುಖ್ಯವಾಹಿನಿಯ ಶಾಲೆಗಳಲ್ಲಿ ವಿಶೇಷ ಬೋಧನಕಾರರ ಹುದ್ದೆಗಳನ್ನು ಸೃಷ್ಟಿಸುವುದು ಮತ್ತು ಸೇವೆಗಳು ಅಲಭ್ಯವಾಗಿರುವ ಸ್ಥಳಗಳಲ್ಲಿ ಅವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಬಳಸಿಕೊಳ್ಳುವುದು |
| • ಶಿಕ್ಷಣ ಹಕ್ಕು ಕಾಯ್ದೆ, 2009 ರ ಕಲಂ 29 (ಮಕ್ಕಳ ಸರ್ವತೋಮುಖ ಪ್ರಗತಿಯನ್ನು ಸಾಧಿಸುವ ಶಾಲಾ ಪಠ್ಯಕ್ರಮವನ್ನು ನಿಗದಿಪಡಿಸುವುದು) | • ಪಠ್ಯಕ್ರಮ ಕೇಂದ್ರೀಕೃತ ಬೋಧನಾ ವಿಧಾನವನ್ನು ಮಕ್ಕಳ ಕಲಿಯುವ ಮಟ್ಟವನ್ನು ಆಧಾರಿಸಿದ ಬೋಧನಾ ವಿಧಾನಕ್ಕೆ ಬದಲಾಯಿಸುವುದು; ಬುದ್ಧಿ ಮಾಂದ್ಯತೆ ಹೊಂದಿರುವ ಮಕ್ಕಳಿಗೆ ಪ್ರತ್ಯೇಕ ಪಠ್ಯವನ್ನು ನಿಗದಿಪಡಿಸುವುದು.<br>• ಮಗುವಿನ ಶಿಕ್ಷಣಕ್ಕೆ ಕುರಿತಂತೆ ಸಮಗ್ರವಾದ ದೃಷ್ಟಿಕೋನವನ್ನು ಹೊಂದಿರುವುದು – ಮಗುವಿನ ಮಾನಸಿಕ, ಸಾಮಾಜಿಕ, ಭಾವನಾತ್ಮಕ, ಮನ:ಶಾಸ್ತ್ರೀಯ ಬೆಳವಣಿಗೆಗೂ ಕೂಡ ಗಮನ ನೀಡುವುದು. ಬೋಧನೆಯು ಕೇವಲ ಸಾಂಪ್ರದಾಯಕವಾಗಿರದೆ, ಪಠ್ಯೇತರ ಚಟುವಟಿಕೆಗಳನ್ನು ಒಳಗೊಳ್ಳತಕ್ಕದ್ದು. |

## 2. ಆರೋಗ್ಯ, ಆಹಾರ ಮತ್ತು ಇತರೆ ಆಸರೆ ನೀಡುವ ನೀಡುವ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಅಡಚಣೆಗಳನ್ನು ನಿವಾರಿಸುವುದು ಮತ್ತು ಅಂತಹ ಸಂದರ್ಭಗಳಲ್ಲಿ ಶೀಘ್ರ ಕ್ರಮ ಕೈಗೊಳ್ಳುವುದು

ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016ರ ಕಲಂ 24 (ಸಾಮಾಜಿಕ ಭದ್ರತೆ) ಪ್ರಕಾರ ಸರ್ಕಾರಗಳು ಅಶಕ್ತ ಕುಟುಂಬಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸತಕ್ಕದ್ದು ಮತ್ತು ಹೀಗೆ ಭದ್ರತೆಯನ್ನು ಒದಗಿಸುವಾಗ ಅಂಗ ವೈಕಲ್ಯ, ಲಿಂಗ, ವಯಸ್ಸು ಮತ್ತು ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸತಕ್ಕದ್ದು.

**2.1 ಕಡಿಮೆ ವರಮಾನ ಹೊಂದಿರುವ ಕುಟುಂಬಳಿಗಾಗಿ ಈ ಕೆಳಕಂಡ ವ್ಯವಸ್ಥೆಯನ್ನು ಬಲಪಡಿಸುವುದು.**

| ಅನ್ವಯವಾಗುವ ಕಾನೂನು | ಶಿಫಾರಸು |
|---|---|
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ಕಲಂ 16 (viii) (ಸಮಗ್ರ ಮತ್ತು ಅಂತರ್ಗತ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷಣ ಸಂಸ್ಥೆಗಳ ಕರ್ತವ್ಯ)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ಕಲಂ 25 (ಆರೋಗ್ಯದ ಕುರಿತು ಕಾಳಜಿ) | • ವಿಕಲಾಂಗ ಮಕ್ಕಳಿಗೆ, ವಿಶೇಷವಾಗಿ ಸೀಮಿತ ಚಲನವಲನಗಳನ್ನು ಹೊಂದಿರುವ ಮಕ್ಕಳಿಗೆ ಮತ್ತು ಅವರ ಆರೈಕೆದಾರರಿಗೆ, ಮತ್ತು ತಲುಪಲಾಗದ ಸ್ಥಳಗಳಲ್ಲಿರುವವರಿಗೆ ಸಾರಿಗೆ ಸೌಲಭ್ಯ – ಸಾರ್ವಜನಿಕ ಸಾರಿಗೆ, ವಿಶೇಷ ಭತ್ಯೆಗಳು (ಉದಾ: ಇ-ಪಾಸ್ ಗಳು) ಇತ್ಯಾದಿ ಒದಗಿಸುವುದು. |
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 24(3)(ಎಫ್) (ಕೆಲವು ವರಮಾನ ಪರಿಮಿತಿಗೆ ಒಳಪಟ್ಟು ವಿಕಲ ಚೇತನರಿಗೆ ಉಚಿತವಾಗಿ ಸಾಧನ-ಸಲಕರಣೆಗಳನ್ನು, ಔಷಧಿಗಳನ್ನು, ಡಯಾಗ್ನಾಸ್ಟಿಕ್ ಸೇವೆಗಳನ್ನು, ವೈಕಲ್ಯವನ್ನು ತಿದ್ದಲು ಅವಶ್ಯವಾದ ಶಸ್ತ್ರಕ್ರಿಯೆಗಳನ್ನು ಉಚಿತವಾಗಿ ಲಭ್ಯ ಮಾಡುವುದು)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 25(2) (i) (ಪ್ರಾಕೃತಿಕ ವಿಕೋಪ ಮತ್ತು ಇನ್ನಿತರ ಅಪಾಯದ ಪರಿಸ್ಥಿತಿಗಳಲ್ಲಿ ವೈದ್ಯಕೀಯ ಸೇವೆಗಳು)<br>• ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 25(ಜೆ) (ಜೀವ ಉಳಿಸಲು ಅವಶ್ಯವಿರುವ ತುರ್ತು ಚಿಕಿತ್ಸೆ ಮತ್ತು ಪ್ರಕ್ರಿಯೆಗಳನ್ನು ಕುರಿತು) | • ದೀರ್ಘಕಾಲದ ಖಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಸಾಮಾನ್ಯವಾಗಿ ಬೇಕಾಗುವ ಮತ್ತು ಅತ್ಯಂತ ಅವಶ್ಯ ಔಷಧಿಗಳ ವಿಶೇಷ ದಾಸ್ತಾನು ಮಾಡಿ, ಸ್ಥಳೀಯವಾಗಿ ಅವು ಲಭ್ಯವಾಗುವ ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಅಪಸ್ಮಾರದಿಂದ ಬಳಲುತ್ತಿರುವ ಮಕ್ಕಳಿಗೆ ಆದ್ಯತೆಯ ಮೇಲೆ ಔಷಧಿಗಳು ದೊರೆಯತಕ್ಕದ್ದು. |

# ಸಂಕ್ಷಿಪ್ತವಾದ ಸಾರಾಂಶ

| | |
|---|---|
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 27(3) (ನೀತಿಗಳನ್ನು ರೂಪಿಸುವಾಗ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ವಿಕಲಾಂಗರ ಕಲ್ಯಾಣಕ್ಕೆ ಶ್ರಮಿಸುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸುವುದು) | ಸೇವೆಗಳ ಲಭ್ಯತೆಯನ್ನು ಸುಧಾರಿಸುವುದು:<br>• ಯೋಜನೆಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರ ಮತ್ತು ನಾಗರಿಕ ಸಮಾಜದ ಸಂಘಟನೆಗಳೊಡನೆ ಸಂಯೋಜನೆಯನ್ನು ಬಲಪಡಿಸುವುದು. |
| • ವಿಕಲ ಚೇತನರ ಹಕ್ಕುಗಳ ಕಾಯ್ದೆ, 2016 ರ ಕಲಂ 17 (ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ಕ್ರಮಗಳು) | ಸೇವೆಗಳ ಲಭ್ಯತೆಯನ್ನು ಸುಧಾರಿಸುವುದು:<br>• ಒಂದೇ ರೀತಿಯ ಅರ್ಹತೆಯ ಅವಶ್ಯಕತೆಯನ್ನು ಹೊಂದಿರುವ ಯೋಜನೆಗಳಿಗೆ ಕೇವಲ ಒಂದೇ ಅರ್ಜಿಯ ಸಲ್ಲಿಸುವ ಪ್ರಕ್ರಿಯೆಯನ್ನು ಜಾರಿಗೆ ತರುವುದರ ಮೂಲಕ ಅಂತಹ ಯೋಜನೆಗಳ ಪ್ರಯೋಜನ ಪಡೆಯುವಲ್ಲಿ ಭರಿಸಬೇಕಾದ ಖರ್ಚುಗಳನ್ನು (ಪ್ರತ್ಯಕ್ಷ ಮತ್ತು ಪರೋಕ್ಷ) ಕಡಿಮೆ ಮಾಡುವುದು. |

**Kotak Mahindra Bank Limited supports the Kotak-Vidhi Inclusive Education Programme in furtherance of its CSR Programme. This report has been authored by Vidhi Centre for Legal Policy, under this Programme.**